<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>
<u>ಹಗರಿಬೊಮ್ಮನಹಳ್ಳಿ</u>

ಸಿ ಸಿ ನಂ. 316/2019

<u>ಸಾಕ್ಷಿಗೆ ದಿನಾಂಕ 13-12-2023 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 12 P.W.: 4

| | | |
|---|---|---|
| ಹೆಸರು | ಃ | ಶೇಖರಪ್ಪ |
| ತಂದೆಯ ಹೆಸರು | ಃ | ಮಲ್ಲಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಶಿಕ್ಷಣಾಧಿಕಾರಿ |
| ವಾಸ ಸ್ಥಳ | ಃ | ಬಳ್ಳಾರಿ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ದಿಃ 07-02-2018 ರಿಂದ 12-01-2022 ರವರೆಗೆ ಹೆಚ್ ಬಿ ಹಳ್ಳಿಯಲ್ಲಿ ಬಿ ಇ ಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10-08-2019 ರಂದು ಮದ್ಯಾಹ್ನ 1 ಗಂಟೆ ಸಮಯದಲ್ಲಿ ಪಿ ಎನ್ ಲೋಕೇಶ್ ಚಾಸಾ-4 ರವರ ನೇತೃತ್ವದಲ್ಲಿ ತುಂಗಭದ್ರಾ ಹಿನ್ನೀರಿನ ಪ್ರದೇಶದ ಗ್ರಾಮಗಳ ಪರಿಶೀಲನೆಗಾಗಿ ನಾನು ಮತ್ತು ಚಾಸಾ-1, ಚಾಸಾ-5 ರಿಂದ 11 ರವರೊಂದಿಗೆ ಹೋಗಿದ್ದು, ತಂಬ್ರಹಳ್ಳಿ, ಕಿತ್ನೂರು ಮತ್ತು ಮುತ್ಕೂರು ಗ್ರಾಮಗಳ ಹತ್ತಿರ ತುಂಗಭದ್ರಾ ನದಿಯ ಹಿನ್ನೀರಿನ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಜನರಿಗೆ ಸೂಕ್ತ ತಿಳುವಳಿಕೆ ನೀಡಿದ ನಂತರ ಮದ್ಯಾಹ್ನ 3ರ ಸಮಯದಲ್ಲಿ ಹಂಪಸಾಗರ-3 ಗ್ರಾಮಕ್ಕೆ ಹೋಗಿದ್ದು, ಅಲ್ಲಿನ ಸಮುದಾಯಭವನದಲ್ಲಿರುವ ಪಡಿತರ ಅಕ್ಕಿ ವಿತರಣಾ ಕೇಂದ್ರಕ್ಕೆ ಭೇಟಿ ಮಾಡಲಾಗಿ ಅಲ್ಲಿ ಚಾಸಾ-4, 5 ಮತ್ತು ಚಾಸಾ-1 ರವರು ನ್ಯಾಯಬೆಲೆ ಅಂಗಡಿಯ ದಾಖಲಾತಿಗಳನ್ನು ಪರಿಶೀಲಿಸುತ್ತಿರುವಾಗ ಸದರಿ ಅಂಗಡಿಯ ಸನ್ನದುದಾರರಾದ 1 ರಿಂದ 5ನೇ ಆರೋಪಿತರು ಅಕ್ರಮ ಗುಂಪುಕಟ್ಟಿಕೊಂಡು ಬಂದು ಚಾಸಾ-1 ರವರಿಗೆ ಏಕಾಏಕಿ ನಿಂದಿಸಿದ್ದು, ಅವಾಚ್ಯ ಶಬ್ದಗಳಿಂದ ಬೈದು, 1ನೇ ಆರೋಪಿಯು ಚಾಸಾ-1, 4 ಮತ್ತು 5 ರವರನ್ನು ತಳ್ಳಾಡಿದ್ದು, 1ನೇ ಆರೋಪಿತನ ಮಗನ ಮತ್ತು ಚಾಸಾ-1

ರವರ ನಡುವೆ ಘರ್ಷಣೆಯಾಯಿತು. ಚಾಸಾ-1 ರವರಿಗೆ 1 ನೇ ಆರೋಪಿತನು ನೀವು ಯಾರು ನಮ್ಮನ್ನು ಕೇಳಲು ಎಂದು ಬೆದರಿಕೆಯನ್ನು ಹಾಕಿದ್ದು, ಚಾಸಾ-1 ರವರನ್ನು ನೋಡಿಕೊಳ್ಳುವುದಾಗಿ ಬೆದರಿಕೆಯನ್ನು ಹಾಕಿದರು. ಚಾಸಾ-1 ರವರ ಮೇಲೆ 1 ನೇ ಆರೋಪಿತನ ಮಗ ಹಲ್ಲೆ ಮಾಡಲು ಪ್ರಯತ್ನಿಸಿದ್ದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆನಂತರ ಘಟನೆಯ ಬಗ್ಗೆ ಚಾಸಾ-1 ರವರು ಆರೋಪಿತನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದು, ನಾನು ಘಟನೆಯ ಕುರಿತು ಪೊಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. 1 ರಿಂದ 5 ನೇ ಆರೋಪಿತರ ಗೈರುಹಾಜರಾತಿಯಲ್ಲಿ ಆರೋಪಿತರನ್ನು ಗುರುತಿಸಲು ಆರೋಪಿತರ ಪರ ವಕೀಲರ ತಕರಾರು ಇರುವುದಿಲ್ಲ.

ಪಾಟೀ ಸವಾಲು. 1 ರಿಂದ 5 ನೇ ಆರೋಪಿತರ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ